# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 34

ಸ್ವಾಮಿ ನಿತ್ಯಸ್ಥಾನಂದ

### ಉಪ್ಪಿನಗೊಂಬೆ

**ಶ್ರೀರಾಮಕೃಷ್ಣರು:** ‘‘ಆ ಅವಸ್ಥೆಯಲ್ಲಿ ಮನುಷ್ಯ ತನ್ನ ‘ಅಹಂ’ಗಾಗಿ ಎಷ್ಟು ಹುಡುಕಿದರೂ ಅದು ದೊರೆಯಲೊಲ್ಲದು. ಅದನ್ನು ಹುಡುಕುವುದಕ್ಕೆ ಅಲ್ಲಿ ಉಳಿದುಕೊಂಡಿರುವವರು ಯಾರು? ಆ ಅವಸ್ಥೆಯನ್ನು ಮುಟ್ಟಿದಾಗ ಆತ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮದ ನಿಜಸ್ವರೂಪದ ಸಂಬಂಧವಾಗಿ ಏನು ಅನುಭವ ಪಡೆಯುತ್ತಾನೆ ಎಂಬುದನ್ನು ಯಾರು ತಾನೇ ಹೇಳಬಲ್ಲರು? ಒಮ್ಮೆ ಒಂದು ಉಪ್ಪಿನ ಗೊಂಬೆ ಸಮುದ್ರದ ಆಳ ಕಂಡು ಹಿಡಿಯಲು ಹೋಯಿತು. ಸಮುದ್ರಕ್ಕೆ ಕಾಲಿಡುವುದೇ ತಡ, ಒಡನೆಯೇ ನೀರಲ್ಲಿ ಕರಗಿಹೋಯಿತು. ಈಗ ಸಮುದ್ರದ ಆಳ ಎಷ್ಟು ಅಂತ ಹೇಳಲು ಯಾರು ಉಳಿದುಕೊಂಡಿದ್ದಾರೆ?’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೦೧)*

ಉಪ್ಪಿನಗೊಂಬೆಯ ಉದಾಹರಣೆ ತುಂಬ ಸ್ವಾರಸ್ಯಕರವಾಗಿದೆ. ಉಪ್ಪಿನಗೊಂಬೆಗೆ ಒಂದು ನಿರ್ದಿಷ್ಟ ಆಕಾರವಿರುವುದರಿಂದ ಪೂರ್ಣದಿಂದ ಪ್ರತ್ಯೇಕವಾಗಿದೆ. ಸಮುದ್ರವು ಪೂರ್ಣತೆಯ ಪ್ರತೀಕ. ಅದರ ಸ್ಪರ್ಶವಾದಾಗ ಗೊಂಬೆಯು ತನ್ನ ವೈಯಕ್ತಿಕತೆಯನ್ನು ಕಳೆದುಕೊಂಡು ಪೂರ್ಣತೆಯೊಂದಿಗೆ ಒಂದಾಗುತ್ತದೆ. ಆ್ಯಂಟೋನಿ ಡಿ. ಮೆಲ್ಲೋ ಅವರು ಒಂದು ಕಥಾರೂಪದಲ್ಲಿ ಈ ವಿಷಯವನ್ನು ಹೇಳುತ್ತಾರೆ. ಒಂದು ಉಪ್ಪಿನಗೊಂಬೆ ಒಮ್ಮೆ ಓಡಾಡುತ್ತ ಸಮುದ್ರತೀರಕ್ಕೆ ಹೋಯಿತು. ಆ ಅಪಾರ ಜಲರಾಶಿಯನ್ನು ಕಂಡು ಅತ್ಯಾಶ್ಚರ್ಯದಿಂದ, ‘‘ನೀನು ಯಾರು?’’ ಎಂದು ಆ ಸಮುದ್ರವನ್ನು ಕೇಳಿತು. ಸಮುದ್ರವು ‘‘ಹತ್ತಿರ ಬಾ, ನಿನಗೇ ತಿಳಿಯುತ್ತದೆ’’ ಎಂದು ಹೇಳಿತು. ಗೊಂಬೆಯು ಹತ್ತಿರ ಹತ್ತಿರ ಹೋದಂತೆಲ್ಲ ಅದಕ್ಕೆ ಜಲಸ್ಪರ್ಶವಾಗಿ ಕರಗತೊಡಗಿತು. ಪೂರ್ಣ ಕರಗಿ ಒಂದು ಕಣ ಉಪ್ಪು ಇರುವಾಗ, ‘‘ಈಗ ನಾನಾರು ಎಂಬುದು ತಿಳಿಯಿತು’’ ಎಂದು ಭಾವಿಸುತ್ತ ಅದೂ ಕರಗಿ ಹೋಯಿತು. ದೇವರನ್ನು ತಿಳಿದಾಗ ನನ್ನನ್ನು ತಿಳಿದಂತಾಗುತ್ತದೆ. ನನ್ನನ್ನು ತಿಳಿದಾಗ ದೇವರನ್ನು ತಿಳಿದಂತಾಗುತ್ತದೆ. *(The song of the Bird. P. 114)*

ನಾವು ಅನೇಕ ಬಗೆಯ ಗೊಂಬೆಗಳನ್ನು ಕಲ್ಪಿಸಿಕೊಳ್ಳಬಹುದು. ಕಲ್ಲಿನ ಗೊಂಬೆಯು ಸಮುದ್ರಕ್ಕೆ ಹೋದರೆ ಅದು ನೀರಿನಿಂದ ಸಂಪೂರ್ಣ ಪ್ರತ್ಯೇಕವಾಗಿಯೇ ಉಳಿಯುತ್ತದೆ. ಇದನ್ನು ಸಾಲೋಕ್ಯದ ಸ್ಥಿತಿಗೆ ಹೋಲಿಸಬಹುದು. ‘ಸಾಲೋಕ್ಯ’ವೆಂದರೆ ಭಗವಂತನ ಲೋಕದಲ್ಲಿ, ಅವನಿಂದ ಪ್ರತ್ಯೇಕವಾಗಿಯೇ ಇರುವುದು ಈ ಹಂತದಲ್ಲಿ ಸಾಧಕನಿಗೆ ಈ ಲೋಕವೇ ಭಗವನ್ಮಯವಾಗಿರುತ್ತದೆ. ಮರದ ಗೊಂಬೆಯು ನೀರಿನಿಂದ ಪ್ರತ್ಯೇಕವಾಗಿ ಉಳಿದರೂ ಅದು ಸಾಕಷ್ಟು ನೀರನ್ನು ಹೀರಿಕೊಳ್ಳುತ್ತದೆ. ಈ ಹಂತದಲ್ಲಿ ಸಾಧಕನು ಭಗವಂತನ ನಿಕಟ ‘ಸಾಮೀಪ್ಯ’ವನ್ನು ಅನುಭವಿಸುತ್ತಾನೆ. ಬಟ್ಟೆಯ ಬೊಂಬೆಯು ನೀರಿಗಿಳಿದರೆ



ಅದು ನೀರನ್ನು ಸಂಪೂರ್ಣ ಹೀರಿಕೊಂಡರೂ ತನ್ನ ಪ್ರತ್ಯೇಕ ಆಕಾರವನ್ನು ಉಳಿಸಿಕೊಳ್ಳುತ್ತದೆ. ಇದು ಭಗವಂತನ ‘ಸಾಯುಜ್ಯ’ವನ್ನು ಅನುಭವಿಸುವ ಸ್ಥಿತಿ ಎನ್ನಬಹುದು. ಇನ್ನೂ ಮುಂದಿನ ಸ್ಥಿತಿ ‘ಸಾರೂಪ್ಯ’ – ಭಗವಂತನೇ ಆಗಿಬಿಡುವುದು. ಇದಕ್ಕೆ ಉಪ್ಪಿನ ಗೊಂಬೆಯ ಉದಾಹರಣೆ. ಇವಲ್ಲದೆ ಪ್ಲಾಸ್ಟಿಕ್ ಗೊಂಬೆಗಳೂ ಇವೆ. ಇವು ನೀರಿನಲ್ಲೆ ತೇಲುತ್ತವೆಯೇ ಹೊರತು ಮುಳುಗುವುದಿಲ್ಲ. ಹಾಗೆಯೇ ಸಾಮಾನ್ಯ ಜನರು ಆಧ್ಯಾತ್ಮಿಕತೆಯನ್ನು ಮೇಲುಮೇಲಕ್ಕೆ ಅನುಸರಿಸುತ್ತಾರೆಯೇ ಹೊರತು ಅದರಲ್ಲಿ ಮುಳುಗುವುದಿಲ್ಲ.

### ವಿಚಾರದ ಮಿತಿ

**ಶ್ರೀರಾಮಕೃಷ್ಣರು:** ‘‘ವಿಚಾರ ಮಾಡುವುದು ಕೊನೆಮುಟ್ಟುವವರೆಗೆ. ಜನ ಬಹಳವಾಗಿ ತರ್ಕದಲ್ಲಿ ತೊಡಗುತ್ತಾರೆ. ಗುರಿ ಮುಟ್ಟಿತು ಎಂದರೆ ತೆಪ್ಪಗಾಗಿಬಿಡುತ್ತಾರೆ. ಕೊಡ ತುಂಬಿತು ಎಂದರೆ, ಕೊಡದ ನೀರು ಕೆರೆ ನೀರು ಒಂದಾದವು ಎಂದರೆ, ಬಳಿಕ ಶಬ್ದ ನಿಂತುಹೋಗುತ್ತದೆ. ಕೊಡ ಪೂರ್ಣವಾಗಿ ತುಂಬಿಕೊಳ್ಳದವರೆಗೆ ಮಾತ್ರ ಶಬ್ದ. ಹಿಂದಿನ ಕಾಲದಲ್ಲಿ ಜನ ಹೇಳುತ್ತಿದ್ದರು: ಜಹಜು ಸಾಗರದ ಕಪ್ಪು ನೀರಿನ ಕಡೆ ಹೋಯಿತು ಎಂದರೆ ಮತ್ತೆ ಹಿಂದಿರುಗಿ ಬಾರದು ಎಂದು.’’ *(ಅಲ್ಲೇ, ಪು. ೧೦೧)*

ಕೊಡ ತುಂಬುವಾಗ ಗಾಳಿ ಹೊರಬರುವುದರಿಂದ ಶಬ್ದ ಮಾಡುತ್ತದೆ. ಹಾಗೆಯೇ ಭಗವಂತನು ನಮ್ಮೊಳಗೆ ತುಂಬುತ್ತಿರುವಾಗ, ಅಹಂ ಹೊರನುಗ್ಗುವಾಗ ಶಬ್ದ ಮಾಡುತ್ತದೆ. ವಿಚಾರಕ್ಕೆ ಒಂದು ಮಿತಿ ಇರುವುದು ನಿಜವಾದರೂ ವಿಚಾರ ಮಾಡುತ್ತಲೇ ಆ ಮಿತಿಯನ್ನು ಅರಿಯಬೇಕು. ನಮ್ಮ ತಾರ್ಕಿಕ ಮನಸ್ಸು ಸೋಲುವವರೆಗೂ ವಿಚಾರ ಮಾಡುತ್ತಲೇ ಹೋಗಬೇಕು.

ತರ್ಕಕ್ಕೂ ಒಂದು ನಿರ್ದಿಷ್ಟತೆ ಇರಬೇಕು, ಅದಕ್ಕೊಂದು ಆಧಾರ ವಿರಬೇಕು. ತರ್ಕವು ಕಟ್ಟಲೂಬಹುದು, ಕೆಡವಲೂಬಹುದು. ಪಂಚದಶಿಯಲ್ಲಿ ವಿದ್ಯಾರಣ್ಯರು ಹೇಳುತ್ತಾರೆ: *(೬.೩೦)*

**ಬುದ್ಧ್ಯಾರೋಹಾಯ ತರ್ಕಶ್ಚೇದಪೇಕ್ಷ್ಯೇತ ತಥಾ ಸತಿ।**
**ಸ್ವಾನುಭೂತ್ಯನುಸಾರೇಣ ತರ್ಕ್ಯತಾಂ ಮಾ ಕುತರ್ಕ್ಯತಾಮ್ ॥**

''ಬುದ್ಧಿಯ ಚುರುಕಿಗಾಗಿ ತರ್ಕವು ಬೇಕಾಗಿದೆಯೆಂದರೆ ಸ್ವಾನುಭವಕ್ಕೆ ಅನುಸಾರವಾಗಿ ತರ್ಕವಾಗಲಿ; ಆದರೆ ಕುತರ್ಕವಾಗದಿರಲಿ.''

ಆಂಗ್ಲಭಾಷೆಯ ಒಂದು ಹೇಳಿಕೆ: ''ತಾರ್ಕಿಕ ಮನಸ್ಸು ಸೋತು ಶರಣಾದಾಗ, ಶ್ರದ್ಧೆಯು ಪುನರುಜ್ಜೀವನಗೊಳ್ಳುತ್ತದೆ. ಶ್ರದ್ಧೆಯು ಯಾವಾಗಲೂ ಇದೆ – ಮೌನವಾಗಿದೆ, ನಿನ್ನ ಕರೆಗಾಗಿ ಕಾಯುತ್ತಿದೆ.'' (When the logical mind is exhausted and surrendres, faith is resurrected. Faith is always there, waiting silently - waiting for you to call it.)

ವಿಚಾರದ ಮಿತಿಯನ್ನು ಮೀರಿದ ಮೇಲೆ, ಮನೋರಾಜ್ಯದ ಗಡಿಯನ್ನು ದಾಟಿದ ಮೇಲೆ ನಮ್ಮ ವ್ಯಕ್ತಿಭಾವ (Sense of individuality) ಕರಗಿ ಹೋಗುತ್ತದೆ. ಹಡಗು ಕಪ್ಪುನೀರನ್ನು ತಲುಪಿದಾಗ ತಾನಿಲ್ಲವಾಗುವಂತೆ ಸಾಧಕನು ತನ್ನನ್ನು ಕಳೆದುಕೊಳ್ಳುತ್ತಾನೆ. ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ: '**ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥**' – ''ಯಾವ ಸ್ಥಿತಿಯನ್ನು ಮುಟ್ಟಿದ ಮೇಲೆ ಹಿಂತಿರುಗಿ ಬರುವುದಿಲ್ಲವೊ ಆ ಸ್ಥಿತಿಯೇ ನನ್ನದು.''

ಅನೇಕರು ತಮ್ಮನ್ನು ಕಳೆದುಕೊಳ್ಳಲು ಭಯಪಡುತ್ತಾರೆ. ಇದೇ ಅಭಿನಿವೇಶ. ಈ ಸ್ಥಿತಿಯು ನಿಜವಾಗಿಯೂ ನಮ್ಮನ್ನು ನಾವು ಕಳೆದುಕೊಳ್ಳುವುದಲ್ಲ. ಬದಲು ನಮ್ಮನ್ನು ನಾವು ಪಡೆಯುವುದು. ನಾವಾಗಲೇ ಈ ಪ್ರಪಂಚದಲ್ಲಿ ನಮ್ಮನ್ನು ನಾವು ಕಳೆದುಕೊಂಡಿದ್ದೇವೆ. ಅಲ್ಲಮ ಪ್ರಭುಗಳ ಒಂದು ವಚನ ಈ ಭಾವನೆಯನ್ನು ಸುಂದರ ಉದಾಹರಣೆಗಳ ಮೂಲಕ ಪ್ರತಿಬಿಂಬಿಸುತ್ತದೆ:

**ಕರ್ಪೂರದ ಗಿರಿಯು ಉರಿಯು ಹಿಡಿದಡೆ ಇದ್ದಿಲುಂಟೆ?**
**ಮಂಜಿನ ಶಿವಾಲಯಕ್ಕೆ ಬಿಸಿಲ ಕಲಶವುಂಟೆ?**
**ಕೆಂಡನ ಗಿರಿಯನರಗಿನ ಬಾಣದಲೆಚ್ಚಡೆ**
**ಮರಳಿ ಬಾಣವನರಸಲುಂಟೆ?**
**ಗುಹೇಶ್ವರನೆಂಬ ಲಿಂಗವನರಿದು ಮರಳಿ ನೆನಯಲುಂಟೆ?**

*(ನೋಡಿ, 'ಸುಳಿವ ಜಂಗಮ'' ಡಾ. ಹೆಚ್.ಎನ್.ಮುರಳೀಧರ, ಪು. ೧೬೫)*

## ಸಗುಣ-ನಿರಾಕಾರ ದೇವರು

**ಶ್ರೀರಾಮಕೃಷ್ಣರು:** ''ಭಕ್ತರಿಗೆ ಸಗುಣಬ್ರಹ್ಮ; ಎಂದರೆ ಭಕ್ತ ನಂಬುತ್ತಾನೆ, ಭಗವಂತ ಸಗುಣ, ಆತ ತನಗಾಗಿ ರೂಪವನ್ನು ಧರಿಸಿ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ ಎಂಬುದಾಗಿ. ನಮ್ಮ ಪ್ರಾರ್ಥನೆ ಕೇಳತಕ್ಕವನು ಆತನೇ. ನೀವು (ಬ್ರಾಹ್ಮ ಭಕ್ತರು) ಪ್ರಾರ್ಥನೆ ಮಾಡುತ್ತೀರಲ್ಲ, ಅದೂ ಆತನನ್ನು ಉದ್ದೇಶಿಸಿಯೇ. ನೀವು ವೇದಾಂತವಾದಿಗಳಲ್ಲ, ಜ್ಞಾನಿಗಳಲ್ಲ, ಭಕ್ತರು. ಭಗವಂತನ ಸಾಕಾರ ರೂಪವನ್ನು ಒಪ್ಪಿದರೆ ಒಪ್ಪಿ, ಇಲ್ಲದಿದ್ದರೆ ಬಿಡಿ; ಅದರಿಂದೇನೂ ಆಕಾಶ ಕಳಚಿ ಬಿದ್ದುಹೋಗುವುದಿಲ್ಲ. ಭಗವಂತ ಒಬ್ಬ ವ್ಯಕ್ತಿ, ಆತ ನಮ್ಮ ಪ್ರಾರ್ಥನೆ ಕೇಳುತ್ತಾನೆ, ಸೃಷ್ಟಿಸ್ಥಿತಿ ಪ್ರಲಯ ಮಾಡುತ್ತಾನೆ, ಆತನಿಗೆ ಅನಂತ ಶಕ್ತಿಯಿದೆ ಎಂಬ ಭಾವನೆ ಇದ್ದುಬಿಟ್ಟರೆ ಅದೇ ಯಥೇಷ್ಟ.'' *(ವಚನವೇದ ೧, ಪು.೧೧೧)*

ಬ್ರಾಹ್ಮಭಕ್ತರು (ಬ್ರಹ್ಮ ಸಮಾಜದವರು) ದೇವರು ಸಗುಣ ಮತ್ತು ನಿರಾಕಾರ ಎಂದು ನಂಬುತ್ತಾರೆ. ಆದ್ದರಿಂದ ಅವರು ಮೂರ್ತಿಪೂಜೆಯನ್ನು ಒಪ್ಪುವುದಿಲ್ಲ. ಶ್ರೀರಾಮಕೃಷ್ಣರು ಇಲ್ಲಿ ಬ್ರಾಹ್ಮಭಕ್ತರನ್ನು ಉದ್ದೇಶಿಸಿ ಮಾತನಾಡುತ್ತಿರುವುದರಿಂದ ಈ ಮೇಲಿನ ಮಾತನ್ನು ಹೇಳಿರುವರು. ಶ್ರೀರಾಮಕೃಷ್ಣರು ಎಲ್ಲ ಬಗೆಯ ಭಗವದ್‌ಕಲ್ಪನೆಯನ್ನೂ ನಂಬುತ್ತಾರೆ. ಆದ್ದರಿಂದ ಅವರು ಸರ್ವಸಮ್ಮತ. ಪ್ರೀತಿ, ದಯೆ, ಅನುಗ್ರಹ, ಶಕ್ತಿ ಮುಂತಾದ ಸದ್ಗುಣಗಳು ಸಾಕಾರ ವ್ಯಕ್ತಿಯಲ್ಲಿ ಮಾತ್ರ ಸಾಧ್ಯ ಎನಿಸುತ್ತದೆ. ಆದರೆ ಈ ಗುಣಗಳೇ ನಿರಾಕಾರವಾದುದರಿಂದ ದೇವರು ನಿರಾಕಾರನಾಗಿರಲು ಸಾಧ್ಯ. ದೇವರು ಈ ಗುಣಗಳನ್ನು ಹೊಂದಿದ್ದಾನೆ ಎನ್ನುವಾಗ ಈ ಗುಣಗಳಿಲ್ಲದ ದೇವರ ಕಲ್ಪನೆ ನಿರಾಕಾರವೇ ಆಗಿರುತ್ತದೆ. ಈ ಗುಣಗಳಿಲ್ಲದಿದ್ದರೆ ದೇವರು ದೇವರೇ ಅಲ್ಲ ಎನ್ನುವುದಾದರೆ, ಈ ಗುಣಗಳೇ ದೇವರು ಎಂದಂತಾಯಿತು. ಆಗಲೂ ದೇವರು ನಿರಾಕಾರನೇ ಎಂದಂತಾಯಿತು. ಈ ಕೆಳಗಿನ ಶ್ಲೋಕ ತುಂಬ ಸ್ವಾರಸ್ಯಕರವಾಗಿದೆ.

**ರೂಪಂ ರೂಪವಿವರ್ಜಿತಸ್ಯ ಭವತೋ ಧ್ಯಾನೇನ ಯತ್ಕಲ್ಪಿತಂ ।**
**ಸ್ತುತ್ಯಾಽನಿರ್ವಚನೀಯತಾಽಖಿಲಗುರೋ ದೂರೀಕೃತಂ ಯನ್ಮಯಾ ॥**
**ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥಯಾತ್ರಾದಿನಾ।**
**ಕ್ಷಂತವ್ಯಂ ಜಗದೀಶ ತದ್ವಿಕಲತಾ ದೋಷತ್ರಯಂ ಮತ್ಕೃತಂ ॥**

''ಹೇ ಜಗದೀಶ, ನನ್ನ ದೌರ್ಬಲ್ಯದಿಂದ ನಾನೆಸಗಿದ ಮೂರು ತಪ್ಪುಗಳನ್ನು ಕ್ಷಮಿಸು:

೧. ನಿನಗೆ ರೂಪವಿಲ್ಲದಿದ್ದರೂ ಧ್ಯಾನದ ಸಂದರ್ಭದಲ್ಲಿ ನಿನಗೆ ರೂಪವನ್ನು ಕಲ್ಪಿಸಿದೆ

೨. ಸ್ತುತಿಯ ಮೂಲಕ ನೀನು ಅನಿರ್ವಚನೀಯನೆಂಬುದನ್ನು ತಳ್ಳಿಹಾಕಿದೆ, ಮತ್ತು

೩. ತೀರ್ಥಯಾತ್ರೆಯ ಮೂಲಕ ನೀನು ಸರ್ವವ್ಯಾಪಿ ಎಂಬುದನ್ನು ನಿರಾಕರಿಸಿದೆ.''

**ಬ್ರಾಹ್ಮಭಕ್ತನ ಪ್ರಶ್ನೆ:** ''ಮಹಾಶಯರೇ, ಭಗವಂತನ ಸ್ವರೂಪದ ಸಂಬಂಧವಾಗಿ ನಾನಾ ಅಭಿಮತಗಳಿವೆಯಲ್ಲ ಏಕೆ? ಕೆಲ

ವರು ಹೇಳುತ್ತಾರೆ, ಭಗವಂತ ಸಾಕಾರ ಅಂತ, ಇನ್ನು ಕೆಲವರು ಹೇಳುತ್ತಾರೆ ಆತ ನಿರಾಕಾರ ಅಂತ. ಇದೂ ಅಲ್ಲದೆ ಈ ಸಾಕಾರ ವಾದಿಗಳು ಹೇಳುತ್ತಾರೆ, ಆತನಿಗೆ ರೂಪಗಳೂ ಇವೆ ಎಂಬು ದಾಗಿ. ಇಷ್ಟೊಂದು ಗೊಂದಲವೆಲ್ಲ ಏಕೆ?''

**ಶ್ರೀರಾಮಕೃಷ್ಣರು:** ''ಭಗವಂತ ಭಕ್ತನಿಗೆ ಯಾವ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೊ ಭಕ್ತ ಆ ರೂಪದ ಸಂಬಂಧವಾಗಿಯೇ ಭಾವಿಸುತ್ತಾನೆ. ವಾಸ್ತವಿಕವಾಗಿ ಯಾವ ಗೊಂದಲವೂ ಇಲ್ಲ. ಹೇಗಾದರೂ ಮಾಡಿ ಆತನ ಸಾಕ್ಷಾತ್ಕಾರ ಪಡೆದುಕೊಂಡು ಬಿಟ್ಟಿದ್ದೇ ಆದರೆ ಬಳಿಕ ಆತ ಎಲ್ಲವನ್ನೂ ತಿಳಿಸಿಕೊಟ್ಟುಬಿಡುತ್ತಾನೆ. ಆ ಕಡೆಗೆ ನೀನು ಇನ್ನೂ ಒಂದು ಹೆಜ್ಜೆಯನ್ನೂ ಹಾಕಿಯೇ ಇಲ್ಲ–ಅಂಥದ್ದರಲ್ಲಿ ಭಗವಂತನ ಸಂಬಂಧವಾಗಿ ಎಲ್ಲವನ್ನು ತಿಳಿದುಕೊಂಡುಬಿಡಲು ಹೇಗೆ ಸಾಧ್ಯ ?'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೦೧)*

ಆಧ್ಯಾತ್ಮಪ್ರವಣತೆಯುಳ್ಳವರಿಗೆ, ಯಥಾರ್ಥ ಸಾಧಕರಿಗೆ ಈ ವಿಷಯದಲ್ಲಿ ಯಾವ ಗೊಂದಲವೂ ಇರುವುದಿಲ್ಲ. ಅವರು ತಮಗಿಷ್ಟವಾದ ರೂಪವನ್ನು ತೆಗೆದುಕೊಂಡು ತಮಗಿಷ್ಟವಾದ ಭಾವದಲ್ಲಿ ಪೂಜಿಸುತ್ತ ಮುಂದುವರಿಯುತ್ತಾರೆ. ನಿರಾಕಾರ ವನ್ನು ನಾವು ಸಾಕಾರ ರೂಪದಲ್ಲಿಯೇ ಭಾವಿಸಬೇಕು, ವ್ಯಕ್ತ ಪಡಿಸಬೇಕು. ನಾವು ಆಕಾರರಹಿತ ಭಾವನೆಗಳನ್ನು, ಚಿಂತನೆ ಗಳನ್ನು ಇಂದ್ರಿಯ ಗೋಚರವಾದ ಅಕ್ಷರಗಳ ಮೂಲಕ, ಅಥವಾ ಧ್ವನಿಯ ಮೂಲಕ ವ್ಯಕ್ತಪಡಿಸುತ್ತೇವೆ. ಅಕ್ಷರಗಳು ಮತ್ತು ಧ್ವನಿ ಮೂರ್ತವಾದರೂ ಅವು ವ್ಯಕ್ತಪಡಿಸುವ ಭಾವನೆ ಅಮೂರ್ತ. 'ಕೋಪ' ಮತ್ತು 'Anger' ಒಂದೇ ಭಾವವನ್ನು ಪ್ರತಿನಿಧಿಸಿದರೂ ಉಚ್ಚರಿಸುವಾಗ ಅವುಗಳ ಧ್ವನಿಯೇ ಬೇರೆ, ಆ ಶಬ್ದಗಳ ಆಕಾರವೂ ಬೇರೆ. ಹಾಗೆಯೇ ನಿರಾಕಾರ ಸತ್ಯವು ಸಾಕಾರ ರೂಪದಲ್ಲಿ ವ್ಯಕ್ತವಾಗುತ್ತದೆ.

### ಬೊಂಬೆಯಾಟ

''ಏನು ಮಾಡಿದರೆ ಆತನ (ದೇವರ) ದರ್ಶನವನ್ನು ಪಡೆದು ಕೊಳ್ಳಬಹುದು'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರು ಉತ್ತರಿಸು ತ್ತಾರೆ:

''ವ್ಯಾಕುಲನಾಗಿ ಆತನ ದರ್ಶನಕ್ಕಾಗಿ ಅಳಬಲ್ಲೆಯಾ? ಮಕ್ಕಳಿಗಾಗಿ, ಹೆಂಡತಿಗಾಗಿ, ಹಣಕ್ಕಾಗಿ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನಿಗಾಗಿ ಯಾರು ಅಳುತ್ತಾರೆ? 'ಮಗು ಗಿಲಿಕಿಯಲ್ಲಿಯೇ ಮಗ್ನವಾಗಿ ತಾಯಿಯನ್ನು ಮರೆತಿರು ವಾಗ ಆಕೆ ಅಡಿಗೆ ಮತ್ತು ಇತರ ಮನೆಗೆಲಸ ಇವನ್ನೆಲ್ಲ ಮಾಡು ತ್ತಿರುತ್ತಾಳೆ. ಯಾವಾಗ ಮಗುವಿಗೆ ಗಿಲಿಕೆ, ಉರುಟುಗೋಲು ಯಾವುದೂ ಬೇಡವಾಗಿ, ಅವನ್ನು ಬಿಸಾಡಿ ಚೀತ್ಕಾರ ಮಾಡುತ್ತ ಅಳಲಾರಂಭಿಸುವುದೋ, ಆಗ ತಾಯಿ ಅನ್ನದ ತಪ್ಪಲೆ ಕೆಳಗಿಳಿಸಿ ಓಡಿ ಓಡಿ ಬಂದು ಮಗುವನ್ನು ಕಂಕುಳಿಗೆ ಹಾಕಿಕೊಳ್ಳುತ್ತಾಳೆ.''

ಮಗುವಿನ ಪಾಲಿಗೆ ಬೊಂಬೆಗಳು ಜೀವಂತವಾಗಿರುತ್ತವೆ – ಮಗು ಅವುಗಳನ್ನು ಅತ್ಯಂತವಾಗಿ ಪ್ರೀತಿಸುವುದರಿಂದ. ಆದ್ದ ರಿಂದಲೇ ಮಗುವಿಗೆ ತೀವ್ರ ಆಸಕ್ತಿ ಇರುತ್ತದೆ. ಬೇರೆಯವರು ಕಸಿಯುವುದಕ್ಕೆ ಬಿಡುವುದೇ ಇಲ್ಲ. ಹಾಗೆಯೇ ನಮಗೆ ಹಣ, ಅಧಿಕಾರಾದಿಗಳು ಜೀವಂತ ಶಕ್ತಿಗಳಾಗುತ್ತವೆ. ಅವುಗಳಿಗೆ ಜೀವ ತುಂಬುವವರು ನಾವೇ. ಅಧಿಕಾರ ಎನ್ನುವುದು ಒಂದು ಅಮೂರ್ತ ಕಲ್ಪನೆ. ಆದರೂ ಅದೊಂದು ಮಹತ್‌ಶಕ್ತಿಯಾಗಿ ನಮ್ಮನ್ನು ಕಾಡುತ್ತದೆ. ಹಾಗೆಯೇ ಹಣವೂ ಕೂಡ ಒಂದು ಕಾಗದದ ತುಂಡು. ಈಗಲಾದರೋ ಅದೊಂದು ಸಂಖ್ಯೆ ಅಷ್ಟೆ (digital money). ಆದರೂ ನಮ್ಮ ಮೇಲೆ ಅದರ ಪ್ರಭುತ್ವ ಎಷ್ಟೊಂದು! ನಾವು ಮಕ್ಕಳಂತೆ ಈ ಎಲ್ಲ ವಿಷಯ ಬೊಂಬೆಗಳಿಗೆ ಜೀವತುಂಬಿ ಅವುಗಳೊಡನೆ ಆಟವಾಡುತ್ತಿದ್ದೇವೆ. ನಾವು ಜೀವ ತುಂಬಿದ ವಸ್ತುಗಳೇ ನಮ್ಮ ಜೀವ ಹೀರುತ್ತಿವೆ.

*(ಮುಂದುವರಿಯುವುದು)*



## ಶ್ರೀಮಾತೆಯವರ ಉಪದೇಶಗಳು

❋ ಮಗೂ, ಕೇವಲ ಓದಿದರೆ ಭಗವಂತನ ಮೇಲೆ ಶ್ರದ್ಧೆಯುಂಟಾಗುವುದೆ? ಹೆಚ್ಚು ಓದಿದರೆ ಗೊಂದಲ ವುಂಟಾಗುವುದು. ಶ್ರೀರಾಮಕೃಷ್ಣರು ಹೇಳಿದ್ದರು, 'ಜಗತ್ತು ಮಿಥ್ಯೆ ; ಭಗವಂತ ಮಾತ್ರ ಸತ್ಯ — ಶಾಸ್ತ್ರ ತಿಳಿದ ಮೇಲೆ ಇದನ್ನೇ ಅರಿತುಕೊಳ್ಳಬೇಕು' ಅಂತ. ನಾನು ನಿನಗೆ ಪತ್ರ ಬರೆದದ್ದಕ್ಕೆ ಅನುಗುಣವಾಗಿ ನೀನು ಆಯಾ ಸಾಮಾನು ಗಳನ್ನು ತೆಗೆದುಕೊಂಡು ಬರುತ್ತೀಯಾ. ಅಂದ ಮೇಲೆ ಪತ್ರದ ಅಗತ್ಯ ಎಲ್ಲಿಯ ತನಕ? ಅದರಲ್ಲಿ ಏನಿದೆಯೋ ತಿಳಿಯುವವರೆಗೆ ಅಷ್ಟೆ. ಯಾವಾಗ ಅದರಲ್ಲೇನಿದೆ ಎಂದು ತಿಳಿದುಬಂತೋ, ಅನಂತರ ಅದರ ಅಗತ್ಯ ವೇನು? ಅನಂತರ ನೀನು ಆ ವಸ್ತುಗಳನ್ನೆಲ್ಲ ನನ್ನ ಬಳಿಗೆ ತಂದುಬಿಡುತ್ತೀಯಾ. ಅದಕ್ಕೆ ಬದಲಾಗಿ, ಹಗಲು ರಾತ್ರಿ ಪತ್ರ ಓದುತ್ತಿದ್ದರೆ ಅದರಿಂದೇನು ಲಾಭ?

❋ ಯಾವಾಗ ಏನು ಆಹಾರ ತೆಗೆದುಕೊಳ್ಳುವು ದಿದ್ದರೂ, ಮೊದಲು ದೇವರಿಗೆ ನಿವೇದಿಸಿ ಅನಂತರ ಅದನ್ನು ಪ್ರಸಾದರೂಪದಲ್ಲಿ ಸ್ವೀಕರಿಸಬೇಕು. ಅದರಿಂದ ರಕ್ತ ಶುದ್ಧವಾಗುವುದು. ರಕ್ತ ಶುದ್ಧವಾದರೆ ಮನಸ್ಸೂ ಶುದ್ಧವಾಗುವುದು.

*('ಶ್ರೀಶಾರದಾದೇವಿ ವಚನವೇದ', ಪು.೪೫೪–೫೬)*